ಆ) ಪುರಸಭೆಗಳನ್ನು ಆರ್ಥಿಕವಾಗಿ ಸರಿಯಾಗಿ ಮಾಡಲಿಕ್ಕೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು;

ಇ) ಹರಿಜನ ಗಿರಿಜನರೂ 80 ರಷ್ಟು ಜನಸಂಖ್ಯೆ ಇರುವ ಪಟ್ಟಣದಲ್ಲಿ ಇರುವ ಪುರಸಭೆಗಳು ಯಾವುವು ? ಅದಕ್ಕೆ ಸರ್ಕಾರದ ಕಾರ್ಯಕ್ರಮಗಳೇನು;

ಈ) 80 ರಷ್ಟು ಇರುವ ಎಸ್.ಸಿ.ಎಸ್.ಟಿ. ಜನಸಂಖ್ಯೆ ಇರುವ ಪೌರಸಭೆಗಳಿಗೆ ಸರ್ಕಾರದ ವತಿಯಿಂದ ಹೆಚ್ಚಿಗೆ ಏನಾದರೂ ಸಹಾಯಧನ ಕೊಡುವರಾ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):-

ಅ) ರಾಜ್ಯದಲ್ಲಿ 135 ಪುರಸಭೆಗಳು ಇರುತ್ತವೆ. ಎಲ್ಲಾ ಪುರಸಭೆಗಳು ಆರ್ಥಿಕ ದುಸ್ಥಿತಿಯಲ್ಲಿ ಇರುತ್ತವೆ.

ಆ) ಜಕಾತಿ ಅನುದಾನವನ್ನು ಶೇ. 15ರಷ್ಟು ಹೆಚ್ಚಿಸಲು ನಿರ್ಧರಿಸಿದೆ. ಕರಗಳನ್ನು ವಿಧಿಸಲು ಕರ್ನಾಟಕ ಪುರಸಭೆ ಕಾಯ್ದೆ, 64ರಲ್ಲಿ ಅವಕಾಶ ಮಾಡಿಕೊಡಲಾಗಿದೆ ಕ್ರಮವಾಗಿ ಅಭಿವೃದ್ಧಿ ಅನುದಾನ, ಮನರಂಜನ ತೆರಿಗೆ ಹಾಗೂ ಸ್ಟಾಂಪ್ ಡ್ಯೂಟಿಯಲ್ಲಿ ಭಾಗ ಇತ್ಯಾದಿಗಳನ್ನು ಪಡೆಯಲೆ ಮಾಡಲಾಗುತ್ತಿದೆ.

ಇ) ಯಾವುದೂ ಇರುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಕೃಷಿ ಕಾರ್ಮಿಕರ ಕನಿಷ್ಠ ವೇತನ

1121 (1969): ಶ್ರೀ ಕ. ಸಿದ್ದಯ್ಯ (ಸಂತೇಮಾರನಹಳ್ಳಿ):-

ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಕೃಷಿ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ನಿಗದಿಪಡಿಸಲಾಗಿದೆಯೇ;

ಆ) ಕಾಲ ಕಾಲಕ್ಕೆ ಪರಿಷ್ಕರಿಸಿದ ವೇತನ (ದಿನಾಂಕ ಮತ್ತು ದರಗಳ ಸಹಿತ);

ಇ) ಪ್ರಸ್ತುತ ಚಾಲ್ತಿಯಲ್ಲಿರುವ ಕನಿಷ್ಠ ವೇತನವನ್ನು ಸರ್ಕಾರವು ಲೀವಿಂಗ್ ವೇಜ್ ಎಂದು ಪರಿಗಣಿಸಿದೆಯೆ;

ಈ) ಕೃಷಿ ಕಾರ್ಮಿಕರ ಹಿತಕ್ಕಾಗಿ ಕನಿಷ್ಠ ವೇತನವನ್ನು ಹೆಚ್ಚಿಸಲು ಕೈಗೊಂಡಿರುವ ಕ್ರಮಗಳೇನಾದರೂ ಇದೆಯೇ ?

ಶ್ರೀ ಬೈರಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು):-

ಅ) ಹೌದು.

ಆ) ಆಯಾ ಕೆಲಸಗಳಿಗನುಗುಣವಾಗಿ ವಿವಿಧ ವರ್ಗಗಳಿಗೆ ವಿವಿಧ ರೀತಿಯ ದರಗಳನ್ನು ನಿಗದಿಪಡಿಸಲಾಗಿದೆ.

ಪ್ರಥಮ ಬಾರಿಗೆ	- 1959	ರೂ.0.50	- ರೂ. 1 75
ಪರಿಷ್ಕರಿಸಿದ್ದು	- 1968	ರೂ 0.75	- ರೂ. 2.55

1975ರ ಪರಿಷ್ಕೃತ ದರ ರೂ. 1.70 – ರೂ. 5.60
1982ರ ಪರಿಷ್ಕೃತ ದರ ರೂ. 6.50 – ರೂ. 10.50
1985ರ ಪರಿಷ್ಕೃತ ದರ ರೂ. 9.50 – ರೂ. 14.00
1988ರ ಪರಿಷ್ಕೃತ ದರ ರೂ. 12.00 – ರೂ. 17.65

ಪುನಃ ಈ ಉದ್ದಿಮೆಯ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ಪರಿಷ್ಕರಿಸುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಇಲ್ಲ.

ಈ) ಕೃಷಿ ಕಾರ್ಮಿಕರ ಕನಿಷ್ಠ ವೇತನವನ್ನು ಆಗಿಂದಾಗ್ಗೆ ಪರಿಷ್ಕರಿಸಲಾಗಿದೆ. ಈ ರೀತಿ ಆಗಿಂದಾಗ್ಗೆ ಕನಿಷ್ಠ ವೇತನವನ್ನು ಪರಿಷ್ಕರಿಸುತ್ತಿರುವುದರಿಂದ ಕೃಷಿ ಕಾರ್ಮಿಕರ ವೇತನದಲ್ಲಿ ಹೆಚ್ಚಳವಾಗುತ್ತಿದೆ. ಸರ್ಕಾರವು ಪುನಃ ಕನಿಷ್ಠ ವೇತನ ಪರಿಷ್ಕರಿಸಲು ಉದ್ದೇಶಿಸಿದ್ದು, ಅದು ಕನಿಷ್ಠ ವೇತನ ಸಲಹಾ ಮಂಡಳಿಯ ಮುಂದೆ ಪರಿಶೀಲನೆಯಲ್ಲಿದೆ.

ತಾಲ್ಲೂಕು ಮತ್ತು ಜಿಲ್ಲಾವಾರು ಪ್ರದೇಶಗಳಲ್ಲಿ ಖಾಲಿ ನಿವೇಶನ ಮತ್ತು ಮನೆಗಳ ಹಂಚಿಕೆಗೆ ಅನುಸರಿಸುವ ವಿಧಾನ

1122 (1403): ಶ್ರೀ ಕೆ. ಸಿದ್ದಯ್ಯ (ಸಂತೇಮಾರನಹಳ್ಳಿ):–

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರವು ತಾಲ್ಲೂಕು ಮತ್ತು ಜಿಲ್ಲಾವಾರು ಪ್ರದೇಶಗಳಲ್ಲಿ ಖಾಲಿ ನಿವೇಶನ ಮತ್ತು ಮನೆಗಳನ್ನು ಹಂಚಿಕೆ ಮಾಡಲು ಅನುಸರಿಸುತ್ತಿರುವ ವಿಧಾನಗಳು ಏನು ?

ಆ) ಆ ರೀತಿ ಹಂಚಿಕೆ ಮಾಡಲ್ಪಟ್ಟ ನಿವೇಶನ ಮತ್ತು ಮನೆಗಳನ್ನು ಜಮೀನುದಾರರಿಗೆ ಮತ್ತು ಸರ್ಕಾರಿ ನೌಕರರಿಗೆ ಮನೆಗಳನ್ನು ನಿರ್ಮಿಸಿರುವ ಪ್ರದೇಶಗಳಲ್ಲಿ ಅಧಿಕೃತ ನಿವಾಸಿಗಳಲ್ಲದವರಿಗೆ ಮನೆನಿವೇಶನಗಳನ್ನು ಹಂಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಈ ರೀತಿ ಹಂಚಿಕೆ ಮಾಡಲಾದ ನಿವೇಶನ ಮತ್ತು ಮನೆಗಳನ್ನು ಹಂಚಿಕೆದಾರರು ನಿಗದಿಪಡಿಸಲಾದ ಕಾಲಕ್ಕೆ ಮುಂಚೆ ಪರಭಾರೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಗೋಪಿನಾಥ ಆರ್. ಸಾಂದ್ರ (ವಸತಿ ಸಚಿವರು):–

ಅ) 1. ಕರ್ನಾಟಕ ಗೃಹ ಮಂಡಳಿಗೆ ಸಂಬಂಧಿಸಿದಂತೆ ನಿವೇಶನ ಮತ್ತು ಮನೆಗಳನ್ನು ಕರ್ನಾಟಕ ಗೃಹ ಮಂಡಳಿ (ಹಂಚಿಕೆ) ನಿಯಮಾವಳಿ 1983ರ ಪ್ರಕಾರ ಹಂಚಿಕೆ ಮಾಡಲಾಗುವುದು.

2. ಆಶ್ರಯ ಯೋಜನೆಯಡಿಯಲ್ಲಿ ನಿವೇಶನ : ಮನೆಗಳನ್ನು ಹಂಚಿಲು ವಿಧಾನಸಭಾ ಸದಸ್ಯರನ್ನು ಅಧ್ಯಕ್ಷರನ್ನಾಗಿ ಒಳಗೊಂಡ ವಿಧಾನಸಭಾ ಮಟ್ಟದ ಟಾಸ್ಕ್‌ಫೋರ್ಸ್ ಸಮಿತಿಯಿಂದ ಫಲಾನುಭವಿಗಳನ್ನು ಗುರುತಿಸಲಾಗುವುದು. ಫಲಾನುಭವಿಯು

1. ಆ ಕ್ಷೇತ್ರದ ನಿವಾಸಿಯಾಗಿರಬೇಕು.
2. ಯಾವುದೇ ನಿವೇಶನ:ಮನೆಯನ್ನು ಹೊಂದಿರಬಾರದು.
3. ಕುಟುಂಬದ ವಾರ್ಷಿಕ ವರಮಾನ ರೂ. 8,400 ನ್ನು ಮೀರಿರಬಾರದು. ಶೇ 18ರಷ್ಟು ಮೀಸಲಾತಿಯನ್ನು ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗದವರಿಗೆ ನೀಡಲಾಗುವುದು.